ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 1- 5
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ದೇವನರಿಯುವ ಜ್ಞಾನ

**ಡಾ. ಮಹದೇವಪ್ರಸಾದ್ ಎನ್.ಎಸ್**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು

***Abstract:***
*ಬಸವಣ್ಣನವರ ವಚನದಲ್ಲಿ ಉಲ್ಲೇಖವಾಗಿರುವ "ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನ" ಎಂಬ ಜ್ಞಾನತ್ರಯದ ಸ್ವರೂಪ ಮತ್ತು ಅದರ ತಾತ್ವಿಕ ಅರ್ಥವನ್ನು ಈ ಅಧ್ಯಯನವು ವಿಶ್ಲೇಷಿಸುತ್ತದೆ. ಆನೆ, ಶ್ವಾನ ಮತ್ತು ಕುಕ್ಕುಟಗಳ ಸಹಜ ಜ್ಞಾನ, ಸ್ಮರಣಶಕ್ತಿ, ಗ್ರಹಣಶಕ್ತಿ, ಸಮಯಪ್ರಜ್ಞೆ ಹಾಗೂ ಪರಿಸರದ ಸೂಕ್ಷ್ಮ ಸಂಕೇತಗಳನ್ನು ಅರಿಯುವ ಸಾಮರ್ಥ್ಯಗಳನ್ನು ಆಧುನಿಕ ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಪರಿಶೀಲಿಸಲಾಗಿದೆ. ಪ್ರಾಣಿಗಳ ಈ ಜ್ಞಾನವು ಅವುಗಳ ಬದುಕು ಮತ್ತು ಪರಿಸರಕ್ಕೆ ಸೀಮಿತವಾದ ಲೌಕಿಕ ಜ್ಞಾನವಾಗಿದ್ದು, ಬಸವಣ್ಣನವರ ದೃಷ್ಟಿಯಲ್ಲಿ ಅದು ಪರಿಪೂರ್ಣ ಆತ್ಮಜ್ಞಾನಕ್ಕೆ ಸಮಾನವಲ್ಲ ಎಂಬುದು ವಚನದ ಆಶಯದಿಂದ ಸ್ಪಷ್ಟವಾಗುತ್ತದೆ. ಇಷ್ಟಲಿಂಗ ಸಾಧನೆ, ಪ್ರಾಣಲಿಂಗ, ಲಿಂಗಾಂಗಯೋಗ, ಅನುಭವ ಮತ್ತು ಲಿಂಗೈಕ್ಯದ ಮೂಲಕ ಲೌಕಿಕ ಜ್ಞಾನವನ್ನು ಮೀರಿ ಪರಮಾನುಭಾವದ ಜ್ಞಾನವನ್ನು ಪಡೆಯುವ ಶರಣಮಾರ್ಗದ ತಾತ್ವಿಕತೆಯನ್ನು ಅಧ್ಯಯನವು ವಿವರಿಸುತ್ತದೆ. ಹೀಗಾಗಿ, "ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ" ಎಂಬ ಬಸವಣ್ಣನವರ ನಿಲುವು ಬಾಹ್ಯ ಜ್ಞಾನಕ್ಕಿಂತ ಆತ್ಮಸಾಕ್ಷಾತ್ಕಾರ ಮತ್ತು ಪರಮತತ್ತ್ವದ ಅರಿವೇ ನಿಜವಾದ ಜ್ಞಾನ ಎಂಬ ಶರಣ ತತ್ತ್ವವನ್ನು ಪ್ರತಿಪಾದಿಸುತ್ತದೆ.*

***Keywords:*** *ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನ, ಶರಣ ತತ್ತ್ವ, ಪರಮಾನುಭಾವ*

## ಪೀಠಿಕೆ

***ಶ್ವಾನಜ್ಞಾನ, ಗಜಜ್ಞಾನ,***
***ಕುಕ್ಕುಟಜ್ಞಾನವೆಂಬ***
***ಜ್ಞಾನತ್ರಯಂಗಳೇನಾದುವು?***
***ಕೂಡಲಸಂಗಮದೇವಾ ನಿಮ್ಮನರಿಯದ***
***ಜ್ಞಾನವೆಲ್ಲಾ ಅಜ್ಞಾನ***

## ಆನೆಗಳ ವಿಶೇಷ ಜ್ಞಾನಗಳು

***ಅಸಾಧಾರಣ ಸ್ಮರಣಶಕ್ತಿ (ಆನೆಯ ನೆನಪು):*** ಆನೆಗಳು ದೀರ್ಘಕಾಲದವರೆಗೆ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಅದ್ಭುತ ಶಕ್ತಿಯನ್ನು ಹೊಂದಿವೆ. ವರ್ಷಗಳ ಹಿಂದೆ ತಾವು ಸಂಚರಿಸಿದ ಹಾದಿಗಳು, ಜಲಮೂಲಗಳು ಮತ್ತು ತಮಗೆ ಸಹಾಯ ಮಾಡಿದ ಅಥವಾ ಅಪಾಯ ಉಂಟುಮಾಡಿದ ಮನುಷ್ಯರನ್ನು ಹಾಗೂ ಇತರ ಪ್ರಾಣಿಗಳನ್ನು ಅವು ಎಂದಿಗೂ ಮರೆಯುವುದಿಲ್ಲ.

***ಭೂಕಂಪನ ಮತ್ತು ಸೌಂಡ್ವೇವ್ ಗ್ರಹಿಕೆ (Infrasound):*** ಆನೆಗಳು ಮನುಷ್ಯರಿಗೆ ಕೇಳಿಸದ ಅತಿ ಕಡಿಮೆ ಆವರ್ತನದ (Infrasound) ಶಬ್ದಗಳನ್ನು ಕಿವಿಯ ಮೂಲಕ ಮತ್ತು ತಮ್ಮ ಪಾದಗಳ ಅಡಿಯಲ್ಲಿರುವ ನರಗಳ ಮೂಲಕ (Seismic communication) ಗ್ರಹಿಸುತ್ತವೆ. ದೂರದಲ್ಲಿ ಮಳೆ ಬರುವುದು, ಭೂಕಂಪನದ

***Please cite this article as:*** ಮಹದೇವಪ್ರಸಾದ್, ಎನ್.ಎಸ್. (2026). ದೇವನರಿಯುವ ಜ್ಞಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 1–5

ಕಂಪನಗಳು ಅಥವಾ ಇತರೆ ಆನೆಗಳ ಕೂಗನ್ನು ಕಿಲೋಮೀಟರ್‌ಗಳ ದೂರದಿಂದಲೇ ಇವು ಅರಿಯಬಲ್ಲವು.

***ಸಾಮೂಹಿಕ ದುಃಖ ಮತ್ತು ಮರಣ ಜ್ಞಾನ:*** ಪ್ರಾಣಿಗಳಲ್ಲಿ ಆನೆಗಳು ಮಾತ್ರ ತಮ್ಮ ಕುಂಟುಂಬದ ಸದಸ್ಯರು ಅಥವಾ ಹತ್ತಿರದ ಆನೆಗಳು ಮೃತಪಟ್ಟಾಗ ತೀವ್ರವಾದ ದುಃಖವನ್ನು ವ್ಯಕ್ತಪಡಿಸುತ್ತವೆ. ಸತ್ತ ಆನೆಯ ದೇಹದ ಸುತ್ತ ಸೇರಿ ಮೌನವಾಗಿ ನಿಲ್ಲುವುದು ಮತ್ತು ಅದರ ಮೂಳೆಗಳನ್ನು (ವಿಶೇಷವಾಗಿ ದಂತಗಳನ್ನು) ಸ್ಪರ್ಶಿಸಿ ಗುರುತಿಸುವುದು ಅವುಗಳ ವಿಶೇಷ ಸಂವೇದನೆಯಾಗಿದೆ.

***ನಕ್ಷೆ ಮತ್ತು ಹಾದಿ ಜ್ಞಾನ:*** ಆನೆಗಳ ಗುಂಪಿನ ಮುಂಚೂಣಿಯಲ್ಲಿರುವ ಅತ್ಯಂತ ಹಿರಿಯ ಹೆಣ್ಣಾನೆ (Matriarch) ತನ್ನ ಜೀವಿತಾವಧಿಯಲ್ಲಿ ಅನುಭವಿಸಿದ ಜ್ಞಾನದ ಆಧಾರದ ಮೇಲೆ, ಬರಗಾಲದ ಸಂದರ್ಭದಲ್ಲೂ ನೂರಾರು ಕಿಲೋಮೀಟರ್ ದೂರದಲ್ಲಿರುವ ನೀರು ಮತ್ತು ಆಹಾರದ ಮೂಲಗಳ ಕಡೆಗೆ ಇಡೀ ಗುಂಪನ್ನು ನಿಖರವಾಗಿ ಮುನ್ನಡೆಸುತ್ತದೆ.

***ಸ್ವಯಂ–ಅರಿವು (Self-Awareness):*** ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿ ತಮ್ಮನ್ನು ತಾವು ಗುರುತಿಸಿಕೊಳ್ಳುವ ಸಾಮರ್ಥ್ಯ (Mirror Self-Recognition) ಹೊಂದಿರುವ ಬೆರಳೆಣಿಕೆಯ ಪ್ರಾಣಿಗಳಲ್ಲಿ ಆನೆಗಳೂ ಸೇರಿವೆ.

**ಶ್ವಾನಗಳ ಪ್ರಮುಖ ವಿಶೇಷ ಗುಣಗಳು**

***ಅಸಾಧಾರಣ ಘ್ರಾಣ ಶಕ್ತಿ (Sense of Smell):*** ನಾಯಿಗಳಿಗೆ ವಾಸನೆಯನ್ನು ಗ್ರಹಿಸುವ ಶಕ್ತಿ ಮನುಷ್ಯರಿಗಿಂತ ಸುಮಾರು 10,000 ದಿಂದ 100,000 ಪಟ್ಟು ಹೆಚ್ಚು ತೀವ್ರವಾಗಿರುತ್ತದೆ. ಈ ವಿಶೇಷ ಜ್ಞಾನದಿಂದಲೇ ಅವು ಅಪರಾಧಿಗಳನ್ನು ಪತ್ತೆ ಹಚ್ಚಲು, ಕಳೆದುಹೋದವರನ್ನು ಹುಡುಕಲು ಮತ್ತು ಭೂಕಂಪನಗಳ ಅಡಿಯಲ್ಲಿ ಸಿಲುಕಿದವರನ್ನು ಪತ್ತೆ ಮಾಡಲು ಸಹಾಯ ಮಾಡುತ್ತವೆ.

***ನಿಷ್ಠೆ ಮತ್ತು ಭಾಂದವ್ಯ (Loyalty):*** ಶ್ವಾನಗಳು ತಮ್ಮ ಯಜಮಾನನಿಗೆ ಮತ್ತು ಕುಟುಂಬಕ್ಕೆ ತೋರುವ ನಿಷ್ಠೆ ಪ್ರಾಣಿ ಜಗತ್ತಿನಲ್ಲಿಯೇ ಅಪರೂಪ. ಇವು ಮನುಷ್ಯರ ಭಾವನೆಗಳನ್ನು (ಸಂತೋಷ, ದುಃಖ, ಭಯ) ಬಹಳ ಬೇಗನೆ ಅರ್ಥಮಾಡಿಕೊಳ್ಳುವ ಮತ್ತು ಭಾವನಾತ್ಮಕವಾಗಿ ಬೆರೆಯುವ ವಿಶೇಷ ಸಾಮರ್ಥ್ಯ ಹೊಂದಿವೆ.

***ಸೂಕ್ಷ್ಮ ಶ್ರವಣ ಶಕ್ತಿ (Hearing Ability):*** ಮನುಷ್ಯರಿಗೆ ಕೇಳಿಸದ ಅತಿ ಕಡಿಮೆ ಮತ್ತು ಅತಿ ಹೆಚ್ಚು ಆವರ್ತನದ (High-frequency) ಶಬ್ದಗಳನ್ನು ನಾಯಿಗಳು ಬಹಳ ಸ್ಪಷ್ಟವಾಗಿ ಕೇಳಿಸಿಕೊಳ್ಳಬಲ್ಲವು. ದೂರದಿಂದ ಬರುವ ವಾಹನಗಳ ಸದ್ದು ಅಥವಾ ಯಜಮಾನರ ಹೆಜ್ಜೆ ಗುರುತನ್ನು ಇವು ಬಹು ಬೇಗ ಗುರುತಿಸುತ್ತವೆ.

***ಮುನ್ಸೂಚನೆ ನೀಡುವ ಜ್ಞಾನ (Premonition):*** ನಾಯಿಗಳಿಗೆ ಪ್ರಕೃತಿಯ ವಿಕೋಪಗಳು, ಅಂದರೆ ಭೂಕಂಪನ, ಸುನಾಮಿ ಅಥವಾ ಸಾವು ಹಾಗೂ ರೋಗರುಜಿನಗಳ (ಉದಾಹರಣೆಗೆ: ಮಧುಮೇಹ ಅಥವಾ ಅಪಸ್ಮಾರ ದಾಳಿ) ಮುನ್ಸೂಚನೆಯನ್ನು ಮನುಷ್ಯರಿಗಿಂತ ಮುಂಚೆಯೇ ಗ್ರಹಿಸುವ ವಿಶೇಷ ಆರನೇ ಇಂದ್ರಿಯ (Sixth Sense) ಇದೆ.

***ಕಾವಲು ಮತ್ತು ಸಂರಕ್ಷಣಾ ಪ್ರವೃತ್ತಿ (Guard Instinct):*** ತಮ್ಮ ಪ್ರದೇಶವನ್ನು ಮತ್ತು ಯಜಮಾನರನ್ನು ರಕ್ಷಿಸಿಕೊಳ್ಳುವ ಸ್ವಾಭಾವಿಕ ಗುಣ ಇವುಗಳಲ್ಲಿದೆ. ತರಬೇತಿ ನೀಡದೆಯೂ ಸಹ ಅಪಾಯವನ್ನು ಮುಂಚಿತವಾಗಿ ಗ್ರಹಿಸಿ ಎಚ್ಚರಿಕೆ ನೀಡುವ ಜಾಣ್ಮೆ ನಾಯಿಗಳಿಗಿದೆ

**ಕುಕ್ಕುಟ ಜ್ಞಾನ**

ಕೋಳಿಯ ಜ್ಞಾನ ಅಥವಾ ಜಾನಪದ ಹಾಗೂ ಹಳಗನ್ನಡ ನಿಘಂಟುಗಳಲ್ಲಿ ಉಲ್ಲೇಖಿಸಿರುವಂತೆ "ಕುಕ್ಕುಟ ಜ್ಞಾನ" ಎಂದರೆ ಬೆಳಕು ಹರಿಯುವುದನ್ನು (ಮುಂಜಾನೆ ಆಗುವುದನ್ನು) ಮುಂಚಿತವಾಗಿಯೇ ಗ್ರಹಿಸುವ ಜ್ಞಾನ ಎಂದರ್ಥ.

ಕನ್ನಡ ಸಂಸ್ಕೃತಿ, ತತ್ವಪದ ಮತ್ತು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಈ ಪದದ ಆಳವಾದ ಆಯಾಮಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು:

**ನಿಘಂಟಿನ ಮತ್ತು ಲೌಕಿಕ ಅರ್ಥ (Literal Meaning)**

***ಪ್ರಕೃತಿಯ ಗ್ರಹಿಕೆ:*** ಕೋಳಿಗೆ ಸೂರ್ಯೋದಯವಾಗುವ ಮುನ್ನವೇ ಕತ್ತಲು ಕರಗಿ ಬೆಳಕು ಮೂಡುವುದರ ಅರಿವಾಗುತ್ತದೆ. ಈ ನೈಸರ್ಗಿಕ ಜ್ಞಾನಕ್ಕೆ ಕನ್ನಡ ಜಾನಪದ ನಿಘಂಟಿನಲ್ಲಿ "ಕುಜ್ಜಿಟಜ್ಞಾನ" ಅಥವಾ ಕೋಳಿಯ ಜ್ಞಾನ ಎಂದು ಕರೆಯಲಾಗಿದೆ.

***ಸಮಯ ಪ್ರಜ್ಞೆ:*** ಗಡಿಯಾರಗಳಿಲ್ಲದ ಕಾಲದಲ್ಲಿ ಮನುಷ್ಯನಿಗೆ ಮುಂಜಾನೆಯ ಎಚ್ಚರವನ್ನು ನೀಡುವ ಸೂಕ್ಷ್ಮ ಬುದ್ಧಿಶಕ್ತಿ ಇದಾಗಿದೆ

***ಎಚ್ಚರಿಕೆ ಸಂದೇಶ:*** ಕೋಳಿಯು ಮುಂಜಾನೆ ಕೂಗುವ ಮೂಲಕ ತನ್ನ ಜಾಗವನ್ನು (Territory) ಇತರರಿಗೆ ರಕ್ಷಣೆ ಮತ್ತು ಸಾಮಾಜಿಕ ಸ್ಥಾನ ಕೊಳಿಯು ಸೂರ್ಯನ ಸಮಯಕ್ಕೆ ಸರಿಯಾಗಿ ಕೂಗುವುದರ ಹಿಂದೆ ಕೇವಲ ಬೆಳಕನ್ನು ನೋಡುವುದಲ್ಲದೆ, ಅದರ ಆಂತರಿಕ ಜೈವಿಕ ಗಡಿಯಾರ (Circadian Rhythm) ಮತ್ತು ಪ್ರಾದೇಶಿಕ ಆಧಿಪತ್ಯದ (Territorial Dominance) ವೈಜ್ಞಾನಿಕ ಕಾರಣಗಳಿವೆ.

**ಆಂತರಿಕ ಜೈವಿಕ ಗಡಿಯಾರ (Circadian Clock)**

***ಜೈವಿಕ ಗಡಿಯಾರ:*** ಕೋಳಿಗಳ ದೇಹದಲ್ಲಿ ನಿಖರವಾದ ಆಂತರಿಕ ಗಡಿಯಾರವಿರುತ್ತದೆ. ಇದು ಸೂರ್ಯ ಮೂಡುವುದಕ್ಕಿಂತ ಮುಂಚೆಯೇ ಎಚ್ಚರಗೊಳ್ಳಲು ಸಹಾಯ ಮಾಡುತ್ತದೆ.

***ಬೆಳಕಿಗೂ ಮುನ್ನವೇ ಧ್ವನಿ:*** ಸೂರ್ಯ ಕಾಣದ ಕತ್ತಲು ಕೋಣೆಯಲ್ಲಿಟ್ಟರೂ ಸಹ ಕೋಳಿಗಳು ಸೂರ್ಯೋದಯದ ಸಮಯವನ್ನು ಅಂದಾಜಿಸಿ ಕೂಗುತ್ತವೆ.

***ಮೆಲೊಟೆನಿನ್ ಮಟ್ಟ ಇಳಿಕೆ:*** ರಾತ್ರಿ ಸಮಯದಲ್ಲಿ ಕೋಳಿಯ ದೇಹದಲ್ಲಿ ಹೆಚ್ಚಿರುವ ನಿದ್ರೆಯ ಹಾರ್ಮೋನ್ (ಮೆಲೊಟೆನಿನ್) ಮುಂಜಾನೆ ಕಡಿಮೆ ಆಗುತ್ತದೆ.

***ಬೆಳಕಿನ ಬದಲಾವಣೆ:*** ಕತ್ತಲಿನಿಂದ ಮುಂಜಾನೆಯ ಮಸುಕಾದ ಬೆಳಕಿಗೆ ಬದಲಾಗುವಾಗ ಇದರ ಆಂತರಿಕ ಗಡಿಯಾರವು ಸಕ್ರಿಯಗೊಂಡು ಕೂಗಲು ಪ್ರಚೋದಿಸುತ್ತದೆ.

***ಅಧಿಕಾರದ ಗತ್ತು:*** ಹಿಂಡಿನಲ್ಲಿ ಅತ್ಯಂತ ಬಲಶಾಲಿ ಅಥವಾ ಮುಖ್ಯ ಕೋಳಿ (Alpha Rooster) ಮೊದಲು ಕೂಗಿ ತನ್ನ ಶ್ರೇಣಿಯನ್ನು ತೋರಿಸುತ್ತದೆ

**ಬೆಳಕನ್ನು ಗ್ರಹಿಸುವ ವಿಶಿಷ್ಟ ಕಣ್ಣುಗಳು (Advanced Light Perception)**

***ವಿಶೇಷ ಜೀವಕೋಶಗಳು:*** ಕೋಳಿಗಳ ಕಣ್ಣಿನಲ್ಲಿ ಮನುಷ್ಯರಿಗಿಂತ ಹೆಚ್ಚಿನ ಸಂಖ್ಯೆಯ ಬೆಳಕನ್ನು ಗ್ರಹಿಸುವ ಜೀವಕೋಶಗಳು (Cone Cells) ಇರುತ್ತವೆ.

***ಅತೀ ಸೂಕ್ಷ್ಮ ಗ್ರಹಿಕೆ:*** ಇವುಗಳಿಗೆ ಮನುಷ್ಯರಿಗಿಂತ ಮೊದಲೇ ಮುಂಜಾನೆಯ ಅತಿ ಮಸುಕಾದ ಬೆಳಕು (Infrared & Ultraviolet light) ಗೋಚರಿಸುತ್ತದೆ.

***ಮುಂಚಿತವಾಗಿ ಕೂಗಲು ಕಾರಣ:*** ಸೂರ್ಯ ನಮಗೆ ಕಣ್ಣಿಗೆ ಕಾಣಿಸುವ ಕನಿಷ್ಠ 45 ನಿಮಿಷಗಳ ಮೊದಲೇ ಕೋಳಿಗಳಿಗೆ ಬೆಳಕಿನ ವ್ಯತ್ಯಾಸ ತಿಳಿಯುವುದರಿಂದ ಅವು ಮೊದಲೇ ಕೂಗಲು ಶುರುಮಾಡುತ್ತವೆ.

***ಮೂರನೇ ಕಣ್ಣು:*** ಕೋಳಿಗಳ ಮೆದುಳಿನಲ್ಲಿರುವ 'ಪೀನಲ್ ಗ್ಲ್ಯಾಂಡ್' ನೇರವಾಗಿ ತಲೆಬುರುಡೆಯ ಮೂಲಕವೇ ಬೆಳಕನ್ನು ಗ್ರಹಿಸುವ ಸಾಮರ್ಥ್ಯ ಹೊಂದಿದೆ.

***ಬೆಳಕಿನ ನಿಯಂತ್ರಣ:*** ಕಣ್ಣು ಮುಚ್ಚಿದ್ದರೂ ಸಹ ಈ ಗ್ರಂಥಿಯು ಹೊರಗಿನ ಬೆಳಕಿನ ಬದಲಾವಣೆಯನ್ನು ಪತ್ತೆಹಚ್ಚಿ, ಕೋಳಿಯನ್ನು ಎಚ್ಚರಗೊಳಿಸುತ್ತದೆ.

## ಸರದಿಯ ಪ್ರಕಾರ ಕೂಗುವಿಕೆ (The Pecking Order)

***ಕೋಳಿಗಳ ನಿಯಮ:*** ಒಂದು ಹಿಂಡಿನಲ್ಲಿರುವ ಎಲ್ಲಾ ಹುಂಜಗಳು ಒಟ್ಟಿಗೆ ಕೂಗುವುದಿಲ್ಲ.

***ಮುಖ್ಯ ಹುಂಜ ಮೊದಲು:*** ಹಿಂಡಿನ ಅತ್ಯಂತ ಬಲಶಾಲಿ ಹುಂಜ ಮೊದಲು ಕೂಗುತ್ತದೆ.

***ನಂತರದ ಸರದಿ:*** ಅದರ ನಂತರ ಎರಡನೇ ಸ್ಥಾನದಲ್ಲಿರುವ ಹುಂಜ, ಆಮೇಲೆ ಮೂರನೇ ಸ್ಥಾನದ ಹುಂಜ ಹೀಗೆ ಕ್ರಮವಾಗಿ ಕೂಗುತ್ತವೆ. ಮುಖ್ಯ ಹುಂಜಕ್ಕೂ ಮುನ್ನ ಬೇರೆ ಹುಂಜ ಕೂಗಿದರೆ ಅದನ್ನು ಶಿಸ್ತು ಉಲ್ಲಂಘನೆ ಎಂದು ಪರಿಗಣಿಸಿ ಜಗಳವಾಗುತ್ತದೆ!

## ಧ್ವನಿಯ ಸಂವಹನ (Communication)

***ಸುರಕ್ಷತೆಯ ಸಂದೇಶ:*** ಮುಂಜಾನೆ ಕೂಗುವ ಮೂಲಕ ಹುಂಜವು ತನ್ನ ಹಿಂಡಿನ ಉಳಿದ ಕೋಳಿಗಳಿಗೆ "ರಾತ್ರಿ ಕಳೆಯಿತು, ಈಗ ಎದ್ದು ಆಹಾರ ಹುಡುಕಲು ಹೊರಡಬಹುದು, ಸುತ್ತಮುತ್ತ ಯಾವುದೇ ಅಪಾಯವಿಲ್ಲ" ಎಂಬ ಭರವಸೆಯ ಸಂದೇಶವನ್ನು ನೀಡುತ್ತದೆ.

## ಆಧ್ಯಾತ್ಮಿಕ ಮತ್ತು ತತ್ವಪದಗಳ ಅರ್ಥ (Spiritual & Mystic Context)

ಕನ್ನಡದ ಶ್ರೇಷ್ಠ ಸಂತ ಹಾಗೂ ತತ್ವಪದಕಾರರಾದ ಶಿಶುನಾಳ ಶರೀಫರ ಕೃತಿಗಳಲ್ಲಿ ಕೋಳಿಯ ಸಂಕೇತವನ್ನು ಆಧ್ಯಾತ್ಮಿಕ ಜಾಗೃತಿಗೆ ಬಳಸಲಾಗಿದೆ. ಅವರ ಪ್ರಸಿದ್ಧ ಪದವಾದ "ಕೊಡಗನ ಕೋಳಿ ನುಂಗಿತ್ತಾ" ಎಂಬಲ್ಲಿ ಕೋಳಿ ಎನ್ನುವುದು ಕೇವಲ ಪಕ್ಷಿಯಲ್ಲ.

***ಮಾಯೆಯ ಜಾಗೃತಿ:*** ಆಧ್ಯಾತ್ಮಿಕ ಪರಿಭಾಷೆಯಲ್ಲಿ 'ಕೋಳಿ ಜ್ಞಾನ' ಎಂದರೆ ಅಜ್ಞಾನವೆಂಬ ಕತ್ತಲೆಯನ್ನು ಸರಿಸಿ, ಜ್ಞಾನವೆಂಬ ಸೂರ್ಯೋದಯವನ್ನು ಆತ್ಮದಲ್ಲಿ ಗುರುತಿಸುವ ಎಚ್ಚರ.

***ಗುರು ಕೃಪೆ:*** ಸಾಧಕನಿಗೆ ತನ್ನೊಳಗಿನ ಅಹಂಕಾರ ಕರಗಿ ಸಂಸಾರದ ಮೋಹದಿಂದ ಮುಕ್ತಿ ಪಡೆಯುವ ಸೂಕ್ಷ್ಮ ಅರಿವು ಮೂಡುವುದನ್ನು ಇದು ಸೂಚಿಸುತ್ತದೆ.

ಗಜ ಜ್ಞಾನ, ಶ್ವಾನ ಜ್ಞಾನ, ಕುಕ್ಕುಟ ಜ್ಞಾನವೆಂಬ ಈ ಮೂರು ಜ್ಞಾನಗಳು ಏನಾದವೂ ಎನ್ನುವ ಪ್ರಶ್ನೆ ಈ ವಚನದಲ್ಲಿದೆ ಈ ಮೇಲಿನ ಜ್ಞಾನಗಳಿಗೆ ಮಿತಿ ಇದೆ, ಪ್ರಾಣಿಗಳ ಈ ಜ್ಞಾನ ಕೇವಲ ಆ ಪ್ರಾಣಿ ಪಕ್ಷಿ ಬದುಕಿನ ಮಿತಿಗೆ ಸಂಬಂಧಿಸಿದ ಜ್ಞಾನ. ಹೀಗೇ ಕೇವಲ ಮನುಷ್ಯ ಜ್ಞಾನದಲ್ಲಿಯೇ ಬದುಕು ನಡೆ[1] ದಂತೆ ಅದು ಭವಿ ಜ್ಞಾನ, ಪರಿಪೂರ್ಣ ಜ್ಞಾನ ತತ್ವದ ನಡೆ ಹೋಗಲು ಸಾಧ್ಯವಿಲ್ಲ. ಈ ಅಲ್ಪ ಜ್ಞಾನಗಳು ಕೇವಲ; ಜೀವನ ನಿರ್ವಹಣೆಗೆ ಬೇಕಾದ ಸಾಮಾನ್ಯ ಜ್ಞಾನಗಳು, ಮನುಷ್ಯನಾದವನು ಇಷ್ಟಜ್ಞಾನ ಮಟ್ಟದಲ್ಲಿ ನಿಲ್ಲದೇ ಮುಂದುವರಿಯಬೇಕು, ಮುಂದುವರಿಯುವ ಮಾರ್ಗವೇ ಶರಣ ಮಾರ್ಗ. ಈ ಮಾರ್ಗದಲ್ಲಿ ಶರಣ ಭಗವಂತನ ನಿಲುವನ್ನು ಅರಿಯುವುದೇ ಇದರ ಮುಖ್ಯ ಉದ್ದೇಶ. ಶರಣನ ಅಧ್ಯಾತ್ಮಿಕ ಸಾಧನೆಗೆ ಬೇಕಾದ ಕುರುಹು ಇಷ್ಟಲಿಂಗ, ಇಷ್ಟಲಿಂಗ ಸಾಧನೆಯಿಂದ ಭಾವಲಿಂಗ ಪ್ರಾಣಲಿಂಗವೆಂಬ ತ್ರಿವಿಧಲಿಂಗ ವಿಡಿದು ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ

ಪ್ರಸಾರಂಗ ಮಹಾಲಿಂಗ ಮುಖಿಗಳನ್ನು ಸಾವಧಾನದಿಂದ ಅರಿತು ಸರ್ವಾಂಗದಲ್ಲಿಯ ಸರ್ವೇಂದ್ರಿಯಗಳಲ್ಲಿನ ಸುಖ ಭೂಗೋಪಾಗಳನ್ನೆಲ್ಲಾ ಸಾವಧಾನದಿಂದ ಭಕ್ತಿಯಿಂದಲೇ ಶಿವಲಿಂಗಕ್ಕೆ ಅರ್ಪಿಸಿದ ಪ್ರಸಾದಿಯ ತನುವೇ ಗುರುವಾಗಿ, ಮನವೇ ಲಿಂಗವಾಗಿ, ಪ್ರಾಣವೇ ಜಂಗಮಲಿಂಗ ಸ್ವರೂಪವಾಗಿದೆ ಹಾಗಾಗಿ ತನ್ನ ಪ್ರಾಣವನ್ನು ಪರಮನುಭಾವಕ್ಕೆ ಮೀಸಲು ಮಾಡಿದ ಪ್ರಾಣಲಿಂಗಿಯ ಪರಮಾನುಭಾವವೇ ಪ್ರಾಣಲಿಂಗ.

ಲಿಂಗಾಂಗಯೋಗವೇ ಪ್ರಾಣವಾಗಿರುವವನು, ಪ್ರಾಣಾಂಗದಲ್ಲಿಯ ಪ್ರಾಣವೇ ಲಿಂಗ ಇದನ್ನರಿತು ಇದರಲ್ಲಿಯೇ ಹಾಸುಹೊಕ್ಕಾಗಿ ಸಕಲ ನಿಷ್ಕಲದಲ್ಲಿನ ಚೈತನ್ಯರೂಪ ಪ್ರಾಣಲಿಂಗ ವೆಂಬ ಪ್ರಜ್ಞೆಯುಳ್ಳನಾದ್ದರಿಂದ ಚಿತ್ಕಳ ಸ್ವರೂಪಿಯಾಗಿರುತ್ತಾನೆ ಪಾವನತೆ ದಿವ್ಯತೆ ಪರಮ ಚೈತನ್ಯ ವಿದ್ಯುತ್ ಪ್ರವಾವ ಶೀಲತೆ ಅಳವಟ್ಟಿರುತ್ತದೆ ಪ್ರಸನ್ನ ಪ್ರಾಜ್ಞತೆ ಪರಮ ಚೈತನ್ಯ ಕಳೆ ಸರ್ವಾಂಗದಲ್ಲಿ ಕಂಗೊಳಿಸುವಂತಿರುತ್ತದೆ ಅನಾಹತದಲ್ಲಿ ಅತ್ಯಾಹಕವಾಗಿ ಲಿಂಗದ ಬೆಳಗುತ್ತಿರುತ್ತದೆ ಕಳಪೂರ್ಣ ಕಾಯರಿಂದ ಪ್ರಾಣದಿಂದ ಲಿಂಗ ಸನ್ನಿಹಿತವಾಗಿ ಸತ್ಯ ಸುಂದರನಾಗಿ ಶೋಭಿಸುತ್ತಾನೆ ಚಿತ್ತ ಬುದ್ದಿ ಅಹಂಕಾರ ಮನಜ್ಞಾನ ಪ್ರಾಣಗಳಿಂದಾಂಚೆಗೆ ಒಂದು ದಿವ್ಯ ರೀತಿಯ ದರ್ಶನವಾಗುತ್ತದೆ ಅದೇ ಪರಂಜ್ಯೋತಿ ಅದೇ ಪರಮಾನುಭಾವಜ್ಯೋತಿ ಅದೇ ಪರಂಚಿದ್ ಜ್ಯೋತಿ ಪ್ರಭೆಯಿಂದ ಪ್ರಾಣಲಿಂಗಿಯ ಹೃದಯ ಪರಮಾನು ಭಾವದಿಂದ ಬೆಳಗುತ್ತಿರುತ್ತದೆ

ಅಖಂಡ ಚೈತನ್ಯವೇ ಲಿಂಗ ಆ ಲಿಂಗವೇ ಪ್ರಾಣ ಸ್ವರೂಪ ವಾಗಿದ್ದ ಪ್ರಾಣಲಿಂಗಿಯ ಲಿಂಗ ಜ್ಞಾನ ದೃಷ್ಠಿ ತೋರುವ ತೋರಿಕೆಯೆಲ್ಲವೂ ಲಿಂಗಸ್ವರೂಪಿಯಾಗಿ ಕಾಣುವ ಚಿರ ಜ್ಞಾನ ದೃಷ್ಠಿಯುಳ್ಳ ಶರಣನೇ ಚಿತ್ ಸ್ವರೂಪ ಆಚಿತ್ ಸ್ವರೂಪವೇ ಲಿಂಗದ ವಿಭಿನ್ನ ಶಕ್ತಿಯು ಆ ಅವಿನಭಾವ ಚಿತ್ ಶಕ್ತಿಯ ಸ್ವರೂಪವೇ ಶರಣನೂ ಶರಣ ಹೃದಯಕಾಶದಲ್ಲಿ ಇಡೀ ವಿಶ್ವ ಬ್ರಹ್ಮಾಂಡವೇ ಸೂಕ್ಷ್ಮವಾಗಿ ಅಡಗಿರುತ್ತದೆ ಸಮಸ್ತ ಬಯಲಿನ ಸಕಲ ಸ್ವರೂಪ ನಿರೂಪದ ವಿಶ್ವ ದುತ್ಪತ್ತಿಗೆ ಮೂಲಕಾರಣನೂ ಆಶ್ರಯನೂ ಬಿಂದುವಿನಲ್ಲಿ ನಾದ ಹೊಂದಿರುವಂತೆ ಮಹಾಘನಲಿಂಗದಲ್ಲಿ ಶರಣನಿರುತ್ತಾನೆ.

ಅವಿನಾಭಾವದ ಅಭಿನ್ನ ಜ್ಞಾನದಿಂದ ಮಹಾಘನಲಿಂಗವೇ ತಾನಾಗಿ ಬೆಚ್ಚಿಬೇರಾಗದಂತೆ ಅದ್ವಯ ಜ್ಞಾನನಂದದಲ್ಲಿರುದೆ ಆನಂದ ಭಕ್ತಿಯು ಅದೇ ಪರಿಪೂರ್ಣ ಪರಮಾನಂದ ಭಕ್ತಿಯ ಸ್ವರೂಪದಲ್ಲಿರುವವನೇ ಶರಣ ಸಮಸ್ತ ಅನ್ಯ ಭಿನ್ನತೆಗಳ ಭಾವ ಭಾವಂಗಳನ್ನೆಲ್ಲ ಅಳಿದು ಮಹಾಘನಲಿಂಗದಲ್ಲಿ ಅಭಿನ್ನ ಮಹಾಜ್ಞಾನದಿಂದ ಆ ಮಹಾ ಘನಲಿಂಗವೇ ತಾನೆಂದಲ್ಲಿ ತನ್ನ ನಿಜಸುಖಾನಂದ ತನಗೆ ಭಿನ್ನವಿಲ್ಲದೆ ದೊರೆಕೊಂಡಿತ್ತು ಹಾಗಾಗಿ ಶರಣನು ಮಹಾಘನಲಿಂಗವು ಭಿನ್ನವಿಲ್ಲದೇ ತಾನೆ ಆಗಿದ್ದನು ಐಕ್ಯನು ತಾನು ಬಯಸುತ್ತಿದ್ದ ಅರಿವಿನ ನೆಲೆಯನ್ನು ತನ್ನ ನಿಜದಲ್ಲಿ ತಾನಿಲ್ಲದೆ ಅಡಗಿ ನಿಂದ ಮಹಾ ಘನಲಿಂಗ ತಾನಾಗಿದುದುದ್ದೇ ಸಮರಸ ಭಕ್ತಿಯು ಆ ಸಮರಸ ಭಕ್ತಿಯೊಂಬುದೀಗ ಲಿಂಗೈಕ್ಯವೂ ಇದನ್ನೇ ಘನಶರಣರು ಐಕ್ಯಸ್ಥಳ ಎಂದು ಹೇಳುತ್ತಾರೆ

ಹೀಗೇ ಅಧ್ಯಾತ್ಮದ ಸಾಧನೆಯಲ್ಲಿ ತೊಡಗಿದ ಶರಣನಿಗೆ ಕೂಡಲಸಂಗಮದೇವನ ಅರಿಯುವ ಜ್ಞಾನ ಲಭಿಸುತ್ತದೆ ಇದೇ ಶರಣನ ನಿಜಜ್ಞಾನ ಅಗಿರುತ್ತದೆ ಇದನೇ ಹೊರತುಪಡಿಸಿದ ಜ್ಞಾನತ್ರಯನಗಳೆಲ್ಲವೂ ಅಜ್ಞಾನಕ್ಕೂ ಸಮಾನ ಎಂದು ಬಸವಣ್ಣ ಈ ವಚನದಲ್ಲಿ ಪ್ರತಿಪಾದಿಸಿದ್ದಾರೆ

ಪರಾಮರ್ಶನ


- ಕಮಲಮ್ಮ. (ಸಂ.). *ಲಿಂಗಾಯತ ಧರ್ಮ.*
- ರುದ್ರಪ್ಪ, ಎಸ್. *ಅನುಭಾವ ನುಡಿ.*
- *ವಚನ ಸಂಪುಟ.* ಕನ್ನಡ ಪುಸ್ತಕ ಪ್ರಾಧಿಕಾರ